ಓ.ಎಸ್. 28/2018, ಡಿ.ಡಬ್ಲ್ಯೂ-2 ಹೆಸರುಃ ಸಿದ್ದಮ್ಮ

**<u>ದಿಃ24-03-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲು : ವಾದಿಯ ಪರ ಶ್ರೀ ಕೆ.ಎಸ್.ಎನ್. ವಕೀಲರಿಂದಃ</u>**

ನನ್ನ ತಂದೆ ಮೃತಪಟ್ಟು 30 ವರ್ಷಗಳಾಗಿವೆ. ನನ್ನ ತಂದೆಯ ಜೀವಿತ ಅವಧಿಯಲ್ಲಿ ಅವರಿಗೆ 7 ಆಸ್ತಿಗಳು ಇದ್ದವು. ಕೋಟೆ ಹೊಲ 15 ಎಕರೆ ಇದೆ. ಕೆಳಗಲ ಏರೆ 4 ಎಕರೆ, ಕಟ್ಟೆಯ ಜಮೀನು 6 ಎಕರೆ, ಮಾಗೋರ್ ಜಮೀನು 1 ಎಕರೆ 30 ಗುಂಟೆ, ನೆಲಕಟ್ಟೆ 4 ಎಕರೆ ಇದೆ. ದಾರಿಯ ಕಡೆ 15 ಗುಂಟೆ ಇದೆ. ಇವುಗಳ ಸರ್ವೆ ನಂಬರ್ ಗೊತ್ತಿಲ್ಲ. ಈ ಎಲ್ಲಾ ಜಮೀನುಗಳ ಖಾತೆ ನನ್ನ ತಂದೆಯ ಮರಣಾ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಬಂದಿವೆ. ನನ್ನ ತಂದೆಯ ಜೀವಿತ ಅವಧಿಯಲ್ಲಿ 1 ನೇ ಪ್ರತಿವಾದಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಚಿತ್ರದುರ್ಗದಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿಯೇ ವಾಸ ಇದ್ದರು. ನನ್ನ ತಂದೆಯ ಮರಣಾ ನಂತರ 1 ನೇ ಪ್ರತಿವಾದಿಯೊಂದಿಗೆ ನಾನು ಮತ್ತು ವಾದಿಯು ಸಹ ಕೆಂಚಪ್ಪರವರ ಮಕ್ಕಳಾಗಿದ್ದು, ನಮ್ಮ ಹೆಸರಿಗೂ ಸಹ ಜಂಟಿ ಖಾತೆ ಮಾಡಿ ಎಂದು ಕಂದಾಯ ಪ್ರಾಧಿಕಾರಕ್ಕೆ ಅರ್ಜಿಯನ್ನು ನೀಡಿರಲಿಲ್ಲ.

2. ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳ ಕುರಿತು ನನ್ನ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ತಂದೆಯ ಜೀವಿತ ಅವಧಿಯಲ್ಲಿ ಈ ಮೇಲ್ಕಂಡಂತೆ ಸ್ವತ್ತುಗಳ ಇದ್ದವು ಎಂಬ ಬಗ್ಗೆ ಹಾಗೂ ನನ್ನ ತಂದೆಯ ಮರಣಾ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಸದರಿ ಸ್ವತ್ತುಗಳ ಖಾತೆ ಏರ್ಪಟ್ಟಿದೆ ಎಂಬ ಬಗ್ಗೆ ಉಲ್ಲೇಖ ಮಾಡಿಲ್ಲ. ನಾನು ಈಗ ನನ್ನ ಪತಿಯ ಮನೆಯಲ್ಲಿ ನನ್ನ ಪತಿ ಹಾಗೂ ಮಗನೊಂದಿಗೆ ವಾಸಿಸುತ್ತಿದ್ದೇನೆ. ನನ್ನ ಸಹೋದರನಾದ 1 ನೇ ಪ್ರತಿವಾದಿ ನಿವೃತ್ತಿ ಹೊಂದಿ ಸುಮಾರು 16 ರಿಂದ 17 ವರ್ಷಗಳಾಗಿವೆ. ವಾದಿ ಈ ದಾವೆಯನ್ನು ದಾವಾ ಅನುಸೂಚಿತ ಸ್ವತ್ತುಗಳು ನಮ್ಮ ಒಟ್ಟು ಕುಟುಂಬಕ್ಕೆ ಮತ್ತು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಹಾಗಾಗಿ ಸದರಿ ಸ್ವತ್ತುಗಳಲ್ಲಿ ಹಿಸ್ಸೆ ಬೇಕು ಎಂದು ಕೇಳಿರುತ್ತಾರೆ ಎಂದರೆ ಸರಿ. ನಾನು ಖರೀದಿಸಿರುವಂತಹ ಸ್ವತ್ತುಗಳನ್ನು ನನ್ನ ಆದಾಯದಿಂದ ಖರೀದಿಸಿರುತ್ತೇನೆ. ಗೂಳಿ ಹೊಸಹಳ್ಳಿಯಲ್ಲಿ ನನ್ನ ಪತಿಗೆ ಸೇರಿದ 8 ಎಕರೆ ಜಮೀನು ಇದೆ. ಈಗ ಸದರಿ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯುತ್ತಿಲ್ಲ.

3. ನನ್ನ ತಂದೆಯ ಜೀವಿತ ಅವಧಿಯಲ್ಲಿ ನನ್ನ ತಂದೆ ಹಾಗೂ 1 ನೇ ಪ್ರತಿವಾದಿ, ವಾದಿ ಹಾಗೂ ನಿಮ್ಮ ನಡುವೆ ವಿಭಾಗ ಆಗಿತ್ತಾ ಎಂದರೆ ಸಾಕ್ಷಿ ಅವರವರ ಪಾಡಿಗೆ ಅವರು ಇದ್ದು, ವಿಭಾಗ ಆಗಿರುವ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ನಂತರ ವಿಭಾಗ ಆಗಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತುಗಳು ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ. ನನ್ನ ತಂದೆಯ ಹೆಸರಿನಲ್ಲಿದ್ದ ಎಲ್ಲಾ ಸ್ವತ್ತುಗಳ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. 15 ಎಕರೆ ಜಮೀನು ಬೀಳು ಇದೆ. 4 ಎಕರೆ 10 ಗುಂಟೆ ಜಮೀನನಲ್ಲೂ ಸಹ ಬೀಳು ಇದೆ. ದಾವಾ ಅನುಸೂಚಿತ 2 ನೇ ಖಂಡಿಕೆಯ ಸ್ವತ್ತಿನ 4 ಎಕರೆ 02 ಗುಂಟೆಯಲ್ಲಿ ಅಡಿಕೆ ತೋಟ ಮತ್ತು ತೇಗದ ಗಿಡ ಇದೆ ಎಂದರೆ ಸಾಕ್ಷಿ 3 ಎಕರೆಯಲ್ಲಿ ಅಡಿಕೆ ತೋಟ ಇದೆ ಎಂದು ಹೇಳುತ್ತಾರೆ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತಿನ 15 ಎಕರೆ 13 ಗುಂಟೆ ಜಮೀನಿನಲ್ಲಿ ಅಡಿಕೆ ತೋಟ ಮತ್ತು ಮೆಕ್ಕೆಜೋಳ ಇದೆ ಎಂದರೆ ಸಾಕ್ಷಿ ಬೀಳು ಇದೆ ಎಂದು ಹೇಳುತ್ತಾರೆ. ಸದರಿ ಜಮೀನುಗಳಿಂದ ಎಷ್ಟು ಉತ್ಪತ್ತಿ ಬರುತ್ತದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳಿಂದ ಬರುತ್ತಿರುವಂತಹ ಆದಾಯವನ್ನು 1 ನೇ ಪ್ರತಿವಾದಿ ಪಡೆದುಕೊಳ್ಳುತ್ತಿದ್ದಾರೆ. ದಾವಾ ಅನುಸೂಚಿತ 5 ನೇ ಖಂಡಿಕೆಯ ಸ್ವತ್ತಾದ ಸ.ನಂ.119/2 ರ 2 ಎಕರೆ 04 ಗುಂಟೆಯಲ್ಲಿ ಅಡಿಕೆ ತೋಟ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 5 ನೇ ಖಂಡಿಕೆಯ ಸ್ವತ್ತಾದ ಸ.ನಂ.119/2 ರ 2 ಎಕರೆ 04 ಗುಂಟೆಯಲ್ಲಿ ತೇಗದ ಮರಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 8 ನೇ ಖಂಡಿಕೆಯ ಸ್ವತ್ತಾದ ಸ.ನಂ.101/2 ರ 3 ಎಕರೆ 27 ಗುಂಟೆ ಸ್ವತ್ತಿನಲ್ಲೂ ಸಹ ಅಡಿಕೆ ತೋಟ ಮತ್ತು ತೇಗದ ಮರಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳ ಆಧಾಯವನ್ನು ನಾನು ಮತ್ತು 1 ನೇ ಪ್ರತಿವಾದಿ ಪಡೆದುಕೊಳ್ಳುತ್ತಿದ್ದೆವು ಎಂದರೆ ಸಾಕ್ಷಿ ನಾನು ಪಡೆದುಕೊಳ್ಳುತ್ತಿರಲಿಲ್ಲ, 1 ನೇ ಪ್ರತಿವಾದಿ ಮಾತ್ರ ಪಡೆದುಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಮ್ಮನ ಮೇಲೆ ಇರುವ ಅಕ್ಕರೆಯ ಕಾರಣದಿಂದ ನಾನು ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೇಳುವುದಿಲ್ಲ. ನಾನು ಈ ವಿಚಾರವನ್ನು ನನ್ನ ಪ್ರತಿವಾದಿ ಪತ್ರದಲ್ಲಿ ಹೇಳಿಲ್ಲ.

4. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತಿಗೆ ವಾದಿಯೇ ಕಂದಾಯವನ್ನು ಪಾವತಿಸುತ್ತಾ ಜಂಟಿ ಸ್ವಾದೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾ ನಂತರ ಒಟ್ಟು ಕುಟುಂಬದ ನಿರ್ವಹಣೆಯನ್ನು 1 ನೇ ಪ್ರತಿವಾದಿಗೆ ವಹಿಸಿರುತ್ತಾರೆ. ನನ್ನ ತಮ್ಮ ಸ್ವತ್ತುಗಳನ್ನು ವಹಿಸಿಕೊಂಡ ನಂತರ ಅವರವರ ಪಾಲಿನ ಸ್ವತ್ತುಗಳ ಕುರಿತಾಗಿ ಅವರಿಗೆ ವಹಿಸಿಕೊಟ್ಟಿಲ್ಲ. ದಾವಾ ಅನುಸೂಚಿತ 1, 10 ಮತ್ತು 13 ಮತ್ತು 14 ರ ಸ್ವತ್ತುಗಳಲ್ಲಿ ಒಂದು ವರ್ಷಕ್ಕೆ 1 ನೇ ಪ್ರತಿವಾದಿ 400 ಅಡಿಕೆ ಚೀಲ

ಅಡಿಕೆಯನ್ನು ಬೆಳೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಡಿಕೆ ಬೆಳೆಯಿಂದ ಬರುವಂತಹ ಆದಾಯದ ಕುರಿತು 1 ನೇ ಪ್ರತಿವಾದಿ ಚಿತ್ರದುರ್ಗದ ಮರ್ಚೆಂಟ್ಸ್ ಬ್ಯಾಂಕಿನಲ್ಲಿ ರೂ.3 ಕೋಟಿ ಹಣವನ್ನು ಠೇವಣಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 11 ನೇ ಖಂಡಿಕೆಯ ಸ್ವತ್ತನ್ನು ಒಟ್ಟು ಕುಟುಂಬದ ಸ್ವತ್ತುಗಳ ಆದಾಯದಿಂದ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಸ್ವತ್ತನ್ನು ಒಟ್ಟು ಕುಟುಂಬದ ಸ್ವತ್ತುಗಳ ಆದಾಯದಿಂದ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ 11 ನೇ ಖಂಡಿಕೆಯ ಸ್ವತ್ತನ್ನು ಎಲ್ಲರೂ ಕೂಡ ಒಟ್ಟು ಕುಟುಂಬದ ಸ್ವತ್ತಾಗಿ ಅನುಭವಿಸಿಕೊಂಡು ಬರುತ್ತಿದ್ದೆವು ಎಂದರೆ ಸರಿಯಲ್ಲ. ದಾವಾ ಅನುಸೂಚಿತ 11 ನೇ ಖಂಡಿಕೆಯ ಸ್ವತ್ತನ್ನು ನಾನು ಕ್ರಯಕ್ಕೆ ಪಡೆದಾಗ ನನ್ನ ತಂದೆ ಜೀವಂತ ಇದ್ದರು, ಆದರೆ ಸದರಿ ಸ್ವತ್ತನ್ನು ಖರೀದಿಸಲು ನನ್ನ ತಂದೆ ಯಾವುದೇ ಆರ್ಥಿಕ ನೆರವನ್ನು ನೀಡಿಲ್ಲ. ನಾನು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಸದರಿ ಸ್ವತ್ತಿನ ಖಾತೆ ನನ್ನ ಹೆಸರಿಗೆ ಏರ್ಪಟ್ಟಿದೆ. ನನ್ನ ಯಜಮಾನರಿಗೆ ಸೇರಿದ ಆಸ್ತಿಯಿಂದ ಬಂದಂತಹ ಆದಾಯದಿಂದ ನಾನು 11 ನೇ ಖಂಡಿಕೆಯ ಸ್ವತ್ತನ್ನು ಖರೀದಿಸಿದ್ದು, ಆ ಬಗ್ಗೆ ಹೇಳಿದ್ದೇನೆ. ನನ್ನ ಪತಿ 40 ವರ್ಷಗಳ ಹಿಂದೆ ಮನೆಯನ್ನು ಬಿಟ್ಟುಹೋಗಿದ್ದು, ಅವರು ಎಲ್ಲಿ ಇದ್ದಾರೆ ಎಂಬ ಬಗ್ಗೆ ಹಾಗೂ ಜೀವಂತ ಇದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

5. ನನ್ನ ಪತಿಗೆ ಗೂಳಿ ಹೊಸಹಳ್ಳಿಯಲ್ಲಿ 8 ಎಕರೆ ಜಮೀನು ಇದ್ದು, ಅದನ್ನು ಹೊರತುಪಡಿಸಿ ಇತರೆ ಯಾವುದೇ ಜಮೀನು ಇಲ್ಲ. ಸದರಿ ಜಮೀನು ನನ್ನ ಪತಿಗೆ ಆತನ ತಂದೆಯ ಮೂಲಕ ಬಂದಿತ್ತು. ನನ್ನ ಪತಿಯ ತಂದೆಗೆ ಇಬ್ಬರು ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು. ನನ್ನ ಮಾವ ಮತ್ತು ನನ್ನ ಪತಿ ವಿಭಾಗ ಮಾಡಿಕೊಂಡಿದ್ದರು. ಸದರಿ ವಿಭಾಗದ ಮೂಲಕ ನನ್ನ ಪತಿಗೆ ಗೂಳಿ ಹೊಸಹಳ್ಳಿಯ ಬಳಿ ಶಂಕರನಹಳ್ಳಿಯಲ್ಲಿ 8 ಎಕರೆ ಬಂದಿತ್ತು. ಸದರಿ ಸ್ವತ್ತು ನನ್ನ ಮಾವ, ನನ್ನ ಪತಿ ಹಾಗೂ ನನ್ನ ಹೆಸರಿನಲ್ಲಿ ಜಂಟಿ ಖಾತೆ ಇದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

6. ದಾವಾ ಅನುಸೂಚಿತ 12 ನೇ ಖಂಡಿಕೆಯ ಸ್ವತ್ತನ್ನು ಒಟ್ಟು ಕುಟುಂಬದ ಪರವಾಗಿ ಹೊರಕೇರಪ್ಪ ರವರಿಂದ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸಾಕ್ಷಿ ನಾನು ಸ್ವಂತಕ್ಕೆ ಪಡೆದಿದ್ದೇನೆ ಎಂದು ಹೇಳುತ್ತಾರೆ. ನಾನು ಒಟ್ಟು ಕುಟುಂಬದ ಆದಾಯದಿಂದ ದಾವಾ ಅನುಸೂಚಿತ 12 ನೇ ಖಂಡಿಕೆಯ ಸ್ವತ್ತನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಅನುಸೂಚಿತ 12 ನೇ ಖಂಡಿಕೆಯ ಸ್ವತ್ತನ್ನು ಜನವರಿ 1997 ರಲ್ಲಿ ಕ್ರಯಕ್ಕೆ ಪಡೆದಿದ್ದು, ಸದರಿ ಸಮಯದಲ್ಲಿಯೂ ಕೂಡ ನನ್ನ ತಂದೆ ಜೀವಂತ ಇದ್ದರು, ಆದರೆ ನನ್ನ ತಂದೆ ಸದರಿ ಸ್ವತ್ತನ್ನು ಖರೀದಿಸಲು ಯಾವುದೇ ಆರ್ಥಿಕ ನೆರವನ್ನು ನೀಡಿಲ್ಲ. ನಾನು 1997 ರಲ್ಲಿ ನನ್ನ ತಂದೆಯ ಮನೆಯಲ್ಲಿ ಇದ್ದೆನು. ನನ್ನ ತಂದೆಯ ಜೊತೆಯಲ್ಲಿ ನಾನು

ಮತ್ತು ನನ್ನ ತಂಗಿಯಾದ ವಾದಿಯವರು ಇದ್ದೆವು. ನನ್ನ ತಮ್ಮನಾದ 1 ನೇ ಪ್ರತಿವಾದಿ ಚಿತ್ರದುರ್ಗದಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ಇದ್ದರು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ